**06/07/23** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ಈ ಜ್ಞಾನದಲ್ಲಿ ಗಂಭೀರತೆಯ ಗುಣವನ್ನು ಧಾರಣೆ ಮಾಡುವುದು ಬಹಳ ಅವಶ್ಯವಾಗಿದೆ, ಎಂದೂ ಸಹ ತಮ್ಮ ಅಭಿಮಾನವು ಬರಬಾರದು, ಮಾತೆಯರಿಗೆ ಗೌರವ ಕೊಡಿ"

ಪ್ರಶ್ನೆ: ಎಲ್ಲಾ ಮಕ್ಕಳ ಪ್ರತಿ ತಂದೆಯ ಆಸೆಯೇನಾಗಿದೆ? ಆ ಆಸೆಯನ್ನು ಯಾವಾಗ ಪೂರ್ಣ ಮಾಡಲು ಸಾಧ್ಯ?

ಉತ್ತರ: ತಂದೆಯ ಆಸೆಯಾಗಿದೆ- ಮಕ್ಕಳು ಇಂತಹ ಪುರುಷಾರ್ಥ ಮಾಡಲಿ, ನರನಿಂದ ನಾರಾಯಣರಾಗಿ ತೋರಿಸಲಿ ಇದರಲ್ಲಿಯೇ ತಂದೆಯ ಪ್ರತ್ಯಕ್ಷತೆಯಾಗುವುದು. ಇಂತಹ ಪ್ರತ್ಯಕ್ಷತೆಯನ್ನು ಮಾಡಿಸಿ, ತಂದೆಯದೂ ಗಾಯನವಾಗಬೇಕು ಮತ್ತು ಮಕ್ಕಳ ಗಾಯನವೂ ಆಗಬೇಕು. ತಂದೆಯು ತಿಳಿಸುತ್ತಾರೆ- ಮಕ್ಕಳೇ, ಒಂದುವೇಳೆ ನೀವು ನರನಿಂದ ನಾರಾಯಣರಾಗುತ್ತೀರೆಂದರೆ ನಿಮ್ಮ ಮಂದಿರವೂ ಆಗುವುದು ಮತ್ತು ನನ್ನದೂ ಆಗುವುದು. ಇಂತಹ ಪೂಜ್ಯರಾಗಲು ತಂದೆಯನ್ನು ಅನುಕರಣೆ ಮಾಡಿ. ನಾವು ಪೂರ್ಣ ಅನುಕರಣೆ ಮಾಡುತ್ತೇವೆಂದು ತಮ್ಮೊಂದಿಗೆ ತಾವು ಪ್ರತಿಜ್ಞೆ ಮಾಡಿಕೊಳ್ಳಿ.

ಗೀತೆ: ಯಾವ ದಿನದಿಂದ ಸೇರಿದೆವು ನಾವು-ನೀವು................

ಓಂ ಶಾಂತಿ. ಮಕ್ಕಳು ಅನುಭವ ಮಾಡುತ್ತೀರಿ- ಮಕ್ಕಳಿಗೆ ಭಾಸವಾಗುತ್ತದೆಯೆಂದರೆ ಅವಶ್ಯವಾಗಿ ನಾವು ಹೊಸ ಪ್ರಪಂಚಕ್ಕಾಗಿ ಎಲ್ಲಾ ಹೊಸ ಮಾತುಗಳನ್ನು ಕೇಳುತ್ತೇವೆ. ನಮ್ಮ ಈ ಪ್ರೀತಿಯು ಹೊಸದೆನಿಸುತ್ತದೆ. ಮತ್ತ್ಯಾರ ಪ್ರೀತಿಯು ಪರಮಪಿತ ಪರಮಾತ್ಮನ ಸಮ್ಮುಖದಲ್ಲಿರುವುದಿಲ್ಲ ಅಂದಾಗ ಇದಂತೂ ಹೊಸ ಮಾತಾಯಿತಲ್ಲವೆ. ನಿಮಗೆ ಗೊತ್ತಿದೆ- ತಂದೆಯು ಪತಿತ-ಪಾವನನಾಗಿದ್ದಾರೆ. ಹಳೆಯ ಪ್ರಪಂಚವನ್ನು ಪತಿತ, ಹೊಸ ಪ್ರಪಂಚವನ್ನು ಪಾವನ ಎಂದು ಹೇಳುತ್ತಾರೆ, ನಿಮ್ಮ ಪ್ರೀತಿಯು ಹೊಸ ಪ್ರಪಂಚದೊಂದಿಗೆ ಜೋಡಿಸಲ್ಪಟ್ಟಿದೆ. ನಮ್ಮ ಪ್ರೀತಿಯು ಈಗ ಹೊಸಪ್ರಪಂಚ ಸ್ವರ್ಗದಲ್ಲಿದೆ ಎಂದು ನೀವು ಮಕ್ಕಳಿಗೆ ಗೊತ್ತಿದೆ. ಅದನ್ನು ಶಿವಾಲಯವೆಂದು ಕರೆಯಲಾಗುತ್ತದೆ, ಇದಕ್ಕೆ ವೇಶ್ಯಾಲಯವೆಂದು ಹೇಳಲಾಗುತ್ತದೆ. ಅವಶ್ಯವಾಗಿ ಇಲ್ಲಿ ವಿಕಾರಿ ಮನುಷ್ಯರಿದ್ದಾರೆ, ಸತ್ಯಯುಗದಲ್ಲಿ ನಿರ್ವಿಕಾರಿಗಳಿರುತ್ತಾರೆ ಆದ್ದರಿಂದ ಶಿವಾಲಯವೆನ್ನುತ್ತಾರಲ್ಲವೆ. ಇಲ್ಲಿ ವಿಕಾರಿ ಮನುಷ್ಯರಿದ್ದಾರೆ, ಸತ್ಯಯುಗದಲ್ಲಿ ನಿರ್ವಿಕಾರಿಗಳಿರುತ್ತಾರೆ ಆದ್ದರಿಂದ ಶಿವಾಲಯವೆನ್ನುತ್ತಾರಲ್ಲವೆ. ಶಿವತಂದೆಯು ಇಂತಹ ನಿರ್ವಿಕಾರಿ ಪ್ರಪಂಚದ ಸ್ಥಾಪನೆ ಮಾಡುತ್ತಾರೆ ಮತ್ತು ನಿಮಗೆ ಗೊತ್ತಿದೆ- ಅವಶ್ಯವಾಗಿ ಈ ಪ್ರಪಂಚದಲ್ಲಿ ದೇವತೆಗಳ ಚಿತ್ರವಿದೆ, ಆ ದೇವತೆಗಳು ಹೊಸಪ್ರಪಂಚದಲ್ಲಿ ಇರುವವರಾಗಿದ್ದಾರೆ. ಭಾರತವಾಸಿಗಳಂತೂ ಎಲ್ಲವನ್ನು ಮರೆತುಹೋಗಿದ್ದಾರೆ, ನಮ್ಮ ಹಿಂದೂಸ್ಥಾನವನ್ನು ಪ್ರಿಯವೆಂದು ಹೇಳುತ್ತಾರೆ. ಹೌದು ಅವಶ್ಯವಾಗಿ ಪ್ರಿಯವಾಗಿತ್ತು ಆದರೆ ವಾಸ್ತವದಲ್ಲಿ ಹಿಂದೂಸ್ಥಾನ ಎನ್ನುವ ಹೆಸರಿಲ್ಲ. ಭಾರತ ಖಂಡವೆಂದು ಹೇಳಲಾಗುತ್ತದೆ ಅಂದಮೇಲೆ ಅವಶ್ಯವಾಗಿ ಇವು ಹೊಸಮಾತುಗಳೆನಿಸುತ್ತವೆ ಎಂದು ಮಕ್ಕಳಿಗೆ ಗೊತ್ತಿದೆ. ಇಂತಹ ಮಾತುಗಳನ್ನು ಎಂದೂ ಕೇಳಿರಲಿಲ್ಲ. ಈ ಜ್ಞಾನವು ಇಡೀ ಪ್ರಪಂಚಕ್ಕಿಂತ ಭಿನ್ನವಾಗಿದೆ. ಭಾರತವಾಸಿಗಳ ಮಂದಿರಗಳು ಬಹಳ ಇದೆ ಆದರೆ ಕ್ರಿಶ್ಚಿಯನ್ನರದು ಒಂದೇ ಚರ್ಚ್ ಇರುತ್ತದೆ. ಬೇರೆ-ಬೇರೆ ಚರ್ಚ್ಗಳನ್ನು ಮಾಡಬಹುದು. ಸತ್ಯಯುಗದಲ್ಲಂತೂ ಯಾವುದೇ ಮಂದಿರಗಳಿರುವುದಿಲ್ಲ ಏಕೆಂದರೆ ಚೈತನ್ಯ ದೇವತೆಗಳ ರಾಜ್ಯ ನಡೆಯುತ್ತದೆ. ದೇವತೆಗಳು ಶಿವಾಲಯ, ಹೊಸ ಪ್ರಪಂಚದಲ್ಲಿ ರಾಜ್ಯ ಮಾಡುತ್ತಿದ್ದರು. ಈಗ ನಾವು ಹೊಸ ಪ್ರಪಂಚಕ್ಕೆ ಹೋಗುತ್ತಿದ್ದೇವೆಂದು ಮಕ್ಕಳಿಗೆ ಗೊತ್ತಿದೆ ಅಂದಾಗ ಈ ವಿಚಾರವನ್ನೂ ಸಹ ಎಂದೂ ಮಾಡಬಾರದು- ತಂದೆಯು ಈ ಹೊಸ ಮನೆಯನ್ನು ಮಾಡಿದ್ದಾರೆ ಎಂದು. ವಾಸ್ತವದಲ್ಲಿ ಹಳೆಯ ಪ್ರಪಂಚದಲ್ಲಿ ಇದೂ ಸಹ ಹಳೆಯದಾಗಿದೆ, ನಮ್ಮ ಪ್ರೀತಿಯು ಈಗ ಹೊಸ ಪ್ರಪಂಚದೊಂದಿಗೆ ಇದೆ. ಆತ್ಮಗಳ ಪ್ರೀತಿಯು ಪರಮಾತ್ಮನೊಂದಿಗೆ ಇದೆ, ಸನ್ಮುಖದಲ್ಲಿ ಕುಳಿತಿದ್ದಾರೆ, ಬ್ರಹ್ಮಾಕುಮಾರ-ಕುಮಾರಿಯರಿಗೆ ಬ್ರಹ್ಮನ ಜೊತೆ ಪ್ರೀತಿಯಿದೆಯೆಂದು ಮನುಷ್ಯರು ತಿಳಿಯುತ್ತಾರೆ ಆದರೆ ನಮ್ಮ ಪ್ರೀತಿಯು ಒಬ್ಬ ಶಿವತಂದೆಯೊಂದಿಗೆ ಇದೆ. ಬೇರೆ ಯಾರ ಮೇಲೂ ಇಲ್ಲ. ಭಲೆ ನಿಮ್ಮ ಹೆಸರು ಬಿ.ಕೆ. ಆಗಿರಬಹುದು ಆದರೆ ಬ್ರಹ್ಮಾರವರೊಂದಿಗೆ ಪ್ರೀತಿಯಿಲ್ಲ. ಈ ಬ್ರಹ್ಮಾರವರಂತೂ ದೇಹಧಾರಿಯಾಗಿದ್ದಾರಲ್ಲವೆ. ಜನನ-ಮರಣದಲ್ಲಿ ಬರುತ್ತಾರೆ. ನೀವು ದೇಹದೊಂದಿಗೆ ಸಂಬಂಧವನ್ನು ಇಡಬಾರದು. ಆ ಗುರುಗಳಂತೂ ತಮ್ಮ ಹೆಸರನ್ನು ಸಚ್ಚಿದಾನಂದ ಎಂದು ಇಟ್ಟುಕೊಳ್ಳುತ್ತಾರೆ ಆದರೆ ಸತ್ಚಿತ್ ಆನಂದಸ್ವರೂಪ ಎಂದು ಪರಮಾತ್ಮನಿಗೇ ಹೇಳಲಾಗುತ್ತದೆ. ಆತ್ಮವು ಸತ್ಚಿತ್ ಆನಂದಸ್ವರೂಪ, ಶಾಂತಸ್ವರೂಪ, ಜ್ಞಾನಸ್ವರೂಪವಾಗಿತ್ತು. ಈಗ ನೀವು ಪುನಃ ಸಂಗಮದಲ್ಲಿ ಆಗುತ್ತೀರಿ. ಹೇಗೆ ತಂದೆಯ ಮಹಿಮೆಯು ಜ್ಞಾನಸಾಗರ, ಶಾಂತಿಸಾಗರ ಎಂದಿದೆಯೋ ಹಾಗೆಯೇ ನೀವೂ ಸಹ ಸತ್ಚಿತ್ ಆನಂದ ಸ್ವರೂಪವಾಗಿದ್ದೀರಿ. ಬೀಜ ಮತ್ತು ವೃಕ್ಷವನ್ನು ನೆನಪು ಮಾಡುವುದರಿಂದ ಇಡೀ ಜ್ಞಾನವು ಬಂದುಬಿಡುತ್ತದೆ. ಅವಶ್ಯವಾಗಿ 5 ಯುಗಗಳಿವೆ. ಈಗ ಇದು ಸಂಗಮಯುಗವಾಗಿದೆ. ಈ ಸಂಗಮಯುಗವನ್ನು ಪ್ರಪಂಚದವರು ತಿಳಿದುಕೊಂಡಿಲ್ಲ. ಭಲೆ ತಿಳಿದಿರಲೂಬಹುದು ಆದರೆ ಸತ್ಯಯುಗದಲ್ಲಿ ಯಾರು ರಾಜ್ಯ ಮಾಡುತ್ತಿದ್ದರು? ಹೇಗೆ ರಾಜ್ಯವನ್ನು ಪಡೆದರು? ಎಂಬುದನ್ನು ಸ್ಪಷ್ಟವಾಗಿ ತಿಳಿದಿಲ್ಲ. ಈಗ ನೀವು ರಾಜ್ಯವನ್ನು ಪಡೆಯುತ್ತಿದ್ದೀರಿ. ಪುನರ್ಜನ್ಮವನ್ನು ತೆಗೆದುಕೊಳ್ಳುತ್ತಾ ಚಕ್ರದಲ್ಲಂತೂ ಅವಶ್ಯವಾಗಿ ಬರಬೇಕಾಗುತ್ತದೆ. ಸದಾ ಯಾರೂ ಸ್ವರ್ಗದಲ್ಲಿರಲು ಸಾಧ್ಯವಿಲ್ಲ. ಸ್ವರ್ಗ ಮತ್ತು ನರಕದ ಪರಿಚಯವು ಈಗ ಸಿಕ್ಕಿದೆ.

ಈಗ ಕಲಿಯುಗವಿದೆ ನಂತರ ಅವಶ್ಯವಾಗಿ ಸತ್ಯಯುಗವಾಗುವುದು ಅಂದರೆ ಸಂಗಮಯುಗದಲ್ಲಿಯೇ ಪರಮಪಿತ ಪರಮಾತ್ಮನು ಬಂದಿರಬೇಕು. ಅವರ ಮಹಿಮೆಯು ಬೇರೆಯಾಗಿದೆ. ಒಬ್ಬರ ಮಹಿಮೆ ಇನ್ನೊಬ್ಬರಿಗೆ ಇರಲು ಸಾಧ್ಯವಿಲ್ಲ. ಪ್ರತಿಯೊಬ್ಬರ ಕರ್ತವ್ಯ ಬೇರೆ, ಸಂಸ್ಕಾರ ಬೇರೆ. ಒಬ್ಬರದು ಇನ್ನೊಬ್ಬರಿಗೆ ಹೋಲುವುದಿಲ್ಲ. ಪ್ರತಿಯೊಂದು ಆತ್ಮನಲ್ಲಿ ತನ್ನತನ್ನದೇ ಆದ ಪಾತ್ರವಿದೆ. ನೀವು ಮಕ್ಕಳಿಗೆ ತಿಳಿಸಲಾಗಿದೆ- ಕೃಷ್ಣನು ಗೀತೆಯ ಭಗವಂತನಾಗಿರಲಿಲ್ಲ. ಭಗವಾನುವಾಚ- ನಾನು ರಾಜಯೋಗವನ್ನು ಕಲಿಸಿ ನಿಮ್ಮನ್ನು ರಾಜರಿಗೂ ರಾಜ ಅರ್ಥಾತ್ ನರನಿಂದ ನಾರಾಯಣ, ನಾರಿಯಿಂದ ಶ್ರೀಲಕ್ಷ್ಮಿಯನ್ನಾಗಿ ಮಾಡುತ್ತೇನೆ. ನೀವು ಸೂರ್ಯವಂಶಿ ನಾರಾಯಣರಾಗುತ್ತೀರೋ ಅಥವಾ ಚಂದ್ರವಂಶಿ ರಾಮನಾಗುತ್ತೀರೋ ಎಂದು ತಂದೆಯು ಕೇಳುತ್ತಾರೆ. ನಂಬರ್ವಾರಂತೂ ಇರುತ್ತಾರಲ್ಲವೆ. ಕೆಲವರು ಬ್ಯಾರಿಸ್ಟರ್, ಬಹಳ ಒಳ್ಳೆಯವರು, ಇನ್ನೂ ಕೆಲವರು ಸಾಧಾರಣರಾಗಿರುತ್ತಾರೆ. ಕೆಲವರು ಸರ್ಜನಂತೂ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುತ್ತಾರೆ. ಕೆಲವರು ತುಂಬಾಕಡಿಮೆ ಸಂಪಾದಿಸುತ್ತಾರೆ, ವಿದ್ಯೆಯ ಮೇಲೆ ಎಲ್ಲಾ ಅವಲಂಬಿಸಿರುತ್ತದೆ. ನಿಮ್ಮಲ್ಲಿಯೂ ಕೆಲವರು ಬಹಳಷ್ಟು ಸಂಪಾದಿಸುವವರಾಗುತ್ತೀರಿ. ಸಿಂಹಾಸನದ ಮೇಲೆ ಕುಳಿತುಕ್ಕೊಳ್ಳುತ್ತೀರಿ. ಇದು ಅತಿದೊಡ್ಡ ಬೇಹದ್ದಿನ ಈಶ್ವರೀಯ ಕಾಲೇಜ್ ಆಗಿದೆ. ಆ ಕಾಲೇಜುಗಳು ಅಲ್ಪಕಾಲಕ್ಕಾಗಿ ಇರುತ್ತದೆ. ಇಷ್ಟು ಜನ ಉತ್ತೀರ್ಣರಾಗುತ್ತಾರೆ ಎನ್ನುವ ಮಿತಿಯಿರುತ್ತದೆ. ಆದರೆ ಇದು ಬೇಹದ್ದಿನ ಕಾಲೇಜ್ ಆಗಿದೆ ಅಂದಾಗ ನೀವು ಹೊಸ ಮಾತುಗಳನ್ನು ಕೆಳುತ್ತೀರಿ. ನೀವು ಅಬಲೆಯರಿಗೆ ಬಲ ಕೊಡುವವರು, ಆ ಪರಮಪಿತ ಪರಮಾತ್ಮನೇ ಆಗಿದ್ದಾರೆ. ಪರಮಾತ್ಮ ತಂದೆಯಿಂದ ನಮಗೆ ಎಷ್ಟೊಂದು ಬಲ ಸಿಗುತ್ತದೆ. ನಾವು ಸೈನಿಕರಾಗಿ ಯುದ್ಧದ ಮೈದಾನದಲ್ಲಿ ನಿಂತಿದ್ದೇವೆ ಎಂದು ಈಗ ನೀವು ತಿಳಿದಿದ್ದೀರಿ. ಹೊಸ ಮಾತಾಗಿದೆಯಲ್ಲವೆ. ಗೀತೆಯಲ್ಲಿ ಪಾಂಡವರ ಮತ್ತು ಕೌರವರ ಯುದ್ಧವನ್ನು ತೋರಿಸಿದ್ದಾರೆ. ಆದರೆ ಯುದ್ಧದ ಮಾತಂತೂ ಇಲ್ಲ. ಪ್ರತಿಯೊಂದು ಮಾತು ಹೊಸದಾಗಿದೆ. ಕೃಷ್ಣ ಭಗವಂತನಲ್ಲ ಅದರೆ ಅವನು ಹೊಸಪ್ರಪಂಚದ ಮೊಟ್ಟಮೊದಲಿಗನಾಗಿದ್ದಾನೆ. ಮೊದಲಿಗರಿಂದ ಹಿಡಿದು ಎಲ್ಲವೂ ಹೊಸ ಮಾತುಗಳಾಗಿವೆ. ಹೊಸ ಪ್ರಪಂಚದ ಮೊದಲಿಗರು ಲಕ್ಷ್ಮೀ-ನಾರಾಯಣರಾಗಿದ್ದಾರೆ ನಂತರ ಅವರ ಮಕ್ಕಳು ಅಂದಾಗ ಲಕ್ಷ್ಮೀ-ನಾರಾಯಣರು ಸತ್ಯಯುಗೀ ಮನುಷ್ಯ ಸೃಷ್ಟಿಯ ಮೊದಲಿಗರಾಗಿದ್ದಾರೆ. ಇಲ್ಲಿ ಮನುಷ್ಯಸೃಷ್ಟಿ ರಚಯಿತ ಮೊದಲಿಗರು ಬ್ರಹ್ಮಾರವರಾಗಿದ್ದಾರೆ. ಮೊಟ್ಟಮೊದಲಿಗರು ಪರಮಪಿತ ಪರಮಾತ್ಮ ಮೊದಲಿಗರಾಗಿದ್ದಾರೆ ನಂತರ ಬ್ರಹ್ಮಾರವರನ್ನು ಮೊದಲಿಗರನ್ನಾಗಿ ಮಾಡುತ್ತಾರೆ. ನಂತರ ಲಕ್ಷ್ಮೀ-ನಾರಾಯಣರನ್ನು ಸತ್ಯಯುಗದ ಮೊದಲಿಗರನ್ನಾಗಿ ಮಾಡುತ್ತಾರೆ. ಇಲ್ಲಿ ಬ್ರಾಹ್ಮಣ ಕುಲದವರಾಗಿದ್ದೀರಿ. ಬ್ರಾಹ್ಮಣಕುಲಕ್ಕೆ ಬ್ರಹ್ಮಾರವರೇ ಹಿರಿಯರೆಂದು ಗಾಯನವಿದೆ. ಬ್ರಾಹ್ಮಣರಂತೂ ಭಲೆ ಅವರೂ ಆಗಿದ್ದಾರೆ ಆದರೆ ಬ್ರಹ್ಮಾಕುಮಾರ-ಕುಮಾರಿಯರ ಹೆಸರನ್ನು ಎಂದೂ ಕೇಳಿಲ್ಲ. ಗೀತೆಯಲ್ಲಿಯೂ ಸಹ ಈ ಹೆಸರಿಲ್ಲ ಅಂದಮೇಲೆ ಹೊಸಮಾತಾಯಿತಲ್ಲವೆ. ಭಾರತವನ್ನು ಹಿಂದೂಸ್ಥಾನವೆಂದು ಹೇಳಿರುವ ಕಾರಣ ಹಿಂದೂ ಧರ್ಮವೆಂದು ಹೇಳಿಬಿಡುತ್ತಾರೆ. ತಮ್ಮ ಪ್ರಾಚೀನ ಧರ್ಮದ ಪರಿಚಯವಿಲ್ಲ. ದೇವತಾಧರ್ಮವು ಇಲ್ಲವೇ ಇಲ್ಲ. ತಮ್ಮ ಧರ್ಮವನ್ನು ಅರಿಯದೇ ಇರುವಕಾರಣ ಎಲ್ಲಾ ಧರ್ಮಗಳೂ ಒಂದೇ ಎಂದು ಹೇಳುತ್ತಾರೆ. ಭಲೆ ಎಲ್ಲಾ ಧರ್ಮಗಳು ಇಲ್ಲಿರಬಹುದು, ಯಾರಿಗೆ ಬೇಕು ಅವರಿರಬಹುದು, ನಿಷೇಧವಿಲ್ಲ. ಎಲ್ಲಾ ಧರ್ಮದವರಿಗೆ ಮಾನ್ಯತೆ ಕೊಡುತ್ತಾರೆ. ಯಾವುದೇ ಧರ್ಮದವರು ಬಂದಿರಬಹುದು. ಹೊರಗಡೆ ನೋಡಿ, ಅವರು ಅನ್ಯಧರ್ಮವನ್ನು ಹೊರಹಾಕುತ್ತಾರೆ. ಶ್ರೀಲಂಕಾ, ಬರ್ಮಾ ಇತ್ಯಾದಿಗಳಿಂದ ಭಾರತೀಯರನ್ನು ಹೊರಹಾಕುತ್ತಾರೆ. ಭಾರತವಂತೂ ವಾಸ್ತವದಲ್ಲಿ ಪ್ರಾಚೀನ ದೇವಿ-ದೇವತಾ ಧರ್ಮದ್ದಾಗಿದೆ ಆದರೆ ಅವರಂತೂ ಯಾರೇ ಬಂದರು ಇರಲಿ ಎಂದು ಹೇಳುತ್ತಾರೆ. ಆದರೆ ಎಲ್ಲರೂ ಒಟ್ಟಿಗೆ ಇರಲು ಸಾಧ್ಯವಿಲ್ಲ. ಅಲ್ಲಿ-ಇಲ್ಲಿ ಧರ್ಮಗಳ ಬಹಳ ಏರುಪೇರಿದೆ. ಭಾರತವು ಎಲ್ಲಾ ಧರ್ಮಗಳಿಗೆ ಆಶ್ರಯ ನೀಡುವುದೆಂದು ಹೇಳುತ್ತಾರೆ ಆದ್ದರಿಂದಲೇ ಭಾರತದ ಮಹಿಮೆಯಿದೆ. ಈಗ ನೀವೆಲ್ಲರೂ ಹೊಸಮಾತುಗಳನ್ನು ಕೇಳುತ್ತೀರಿ. ಈ ಸಮಯದಲ್ಲಿ ಭಾರತದಲ್ಲಿ ದೇವಿ-ದೇವತಾ ಧರ್ಮದವರು ಯಾರೂ ಇಲ್ಲ. ನಾವು ಈ ಹೊಸ ಪ್ರಪಂಚಕ್ಕಾಗಿ ಪುರುಷಾರ್ಥ ಮಾಡುತ್ತಿದ್ದೇವೆ. ಶಿವತಂದೆಯು ಸ್ವರ್ಗವನ್ನು ರಚಿಸುತ್ತಾರೆ ಹಾಗೆ ನೋಡಿದರೆ ಎಲ್ಲರೂ ಬ್ರಹ್ಮನ ಸಂತಾನರಾಗಿದ್ದಾರೆ. ಆದರೆ ವಿಶೇಷವಾಗಿ ಬ್ರಾಹ್ಮಣರೆಂದು ಗಾಯನವಿದೆ. ಅವರನ್ನು ಯಾವಾಗ ರಚಿಸಿದರು? ಅವಶ್ಯವಾಗಿ ಸಂಗಮಯುಗದಲ್ಲಿಯೇ ರಚಿಸಿದರು. ವರ್ಣಗಳನ್ನೂ ಸಹ ಒಳ್ಳೆಯ ರೀತಿಯಲ್ಲಿ ತೋರಿಸಬೇಕಾಗಿದೆ. ನಾವು ಬ್ರಾಹ್ಮಣರು ಶಿಖೆಗೆ ಸಮಾನ, ನಂತರ ದೇವತೆಗಳು, ಕ್ಷತ್ರಿಯರು, ವೈಶ್ಯರು, ಶೂದ್ರರಾಗುತ್ತೇವೆ ಅಂದಾಗ ಈ ಜ್ಞಾನವೂ ಸಹ ಬಹಳ ಗುಹ್ಯ ಮತ್ತು ರಮಣೀಕವಾಗಿದೆ. ಇದು ಪರಿಶ್ರಮದಿಂದ ಮನುಷ್ಯರ ಬುದ್ಧಿಯಲ್ಲಿ ಕುಳಿತುಕೊಳ್ಳುತ್ತದೆ.

ನೀವು ಮಕ್ಕಳು ಈ ಜ್ಞಾನವನ್ನು ಚೆನ್ನಾಗಿ ಧಾರಣೆ ಮಾಡಿಕೊಳ್ಳಬೇಕು. ಎಂದೂ ಸಹ ಬ್ರಾಹ್ಮಣಿಯರೊಂದಿಗೆ ಮುನಿಸಿಕೊಳ್ಳಬಾರದು. ಮುನಿಸಿಕೊಂಡು ವಿದ್ಯೆಯನ್ನು ಬಿಡಬಾರದು. ಇಲ್ಲವೆಂದರೆ ರಸಾತಳದಲ್ಲಿ ಹೋಗಿಬಿಡುತ್ತೀರಿ. ತಂದೆಯು ತಿಳಿಸುವುದಕ್ಕಾಗಿ ಬಂದಿದ್ದಾರೆಂದರೆ ಕೇಳಬೇಕಲ್ಲವೆ. ಭಕ್ತಿಮಾರ್ಗದಲ್ಲಿ ಗೀತೆಯನ್ನು ಕೇಳಬೇಕೆಂದರೆ ಎಷ್ಟೊಂದು ನಿಯಮಗಳಿರುತ್ತವೆ. ಅವರು ಪೂರ್ಣ ನಿಯಮದಿಂದ ಕೇಳುತ್ತಾರೆ. ಮಂದಿರಗಳಲ್ಲಿಯೂ ಸಹ ನಿಯಮ ಪೂರ್ವಕವಾಗಿ ಹೋಗುತ್ತಾರೆ. ಪ್ರತಿನಿತ್ಯ ಪಕ್ಕಾ ನಿಯಮಗಳನ್ನು ಇಟ್ಟುಕೊಂಡಿರುತ್ತಾರೆ. ನಿಮ್ಮ ನಿಯಮವಂತೂ ಬಹಳ ಕಠಿಣವಾಗಿದೆ. ನೆನಪನ್ನು ಒಂದು ಗಳಿಗೆ ಅರ್ಧ ಗಳಿಗೆ..... ಹೀಗೇ ಹೆಚ್ಚಿಸುತ್ತಿರಬೇಕು. ತಂದೆಯನ್ನು ನೆನಪು ಮಾಡುವುದರಿಂದ ಬುದ್ಧಿಯ ಬೀಗವು ತೆರೆಯಲ್ಪಡುತ್ತದೆ. ವಿಚಾರಸಾಗರ ಮಂಥನವನ್ನು ಶಿವಬಾಬಾ ಮಾಡುವುದಿಲ್ಲಾ ಅವರಿಗೆ ವಿಚಾರಸಾಗರ ಮಂಥನದ ಅವಶ್ಯಕತೆಯೇ ಇಲ್ಲ. ಆದರೆ ನಿಮಗೆ ಅವಶ್ಯಕತೆಯಿದೆ, ಯಾರಿಗೆ ಹೇಗೆ ತಿಳಿಸಬೇಕು? ಆದ್ದರಿಂದ ಎಂದೂ ಸಹ

ಮುನಿಸಿಕೊಳ್ಳಬಾರದು. ಒಬ್ಬರು ಇನ್ನೊಬ್ಬರಿಗೆ ಗೌರವವನ್ನು ಕೊಡಬೇಕು. ಕೆಲವು ಮಕ್ಕಳಿಗೆ ಮಹಾರಥಿಗಳಿಗೆ ಗೌರವ ಕೊಡುವುದು ಬರುವುದಿಲ್ಲ. ಬ್ರಾಹ್ಮಣಿಯರು ಯಾರಿದ್ದಾರೆಯೋ ಅವರು ಮುಖ್ಯವಾಗಿದ್ದಾರೆ ಏಕೆಂದರೆ 10-12 ಜನರನ್ನಾದರೂ ತಮ್ಮ ಸಮಾನ ಮಾಡಿಕೊಳ್ಳುತ್ತಾರಲ್ಲವೆ. ಅಂದಾಗ ಅವರಿಗೆ ಗೌರವ ಕೊಡಬೇಕಾಗುತ್ತದೆ. ಹೇಗೆ ನೀವು ಶಿವತಂದೆಯ ಏಜೆಂಟ್ ಆಗಿದ್ದೀರಿ. ಎಲ್ಲಾ ಏಜೆಂಟ್ಗಳು ಒಂದೇ ರೀತಿಯಿರುವುದಿಲ್ಲ ನಂಬರ್ವಾರ್ ಇರುತ್ತಾರೆ. ಆದರೂ ಸಹ ಏಜೆಂಟ್ ಆಗಿದ್ದಾರಲ್ಲವೆ. ಕೆಲವರಂತೂ ತುಂಬಾ ಚೆನ್ನಾಗಿ ಧಾರಣೆ ಮಾಡುತ್ತಾರೆ. ಹಗಲು-ರಾತ್ರಿ ಸೇವೆಯಲ್ಲಿಯೇ ತತ್ಪರರಾಗಿರುತ್ತಾರೆ. ಶಿವತಂದೆಯೂ ಸಹ ಇಲ್ಲಿ ಸೇವೆಗಾಗಿ ಬಂದಿದ್ದಾರಲ್ಲವೆ. ತಂದೆಯು ತಿಳಿಸುತ್ತಾರೆ- ನಾನು ಡಬಲ್ ಕಾರ್ಯವನ್ನು ಮಾಡುತ್ತೇನೆ, ಭಕ್ತರ ಸೇವೆಯನ್ನೂ ಮಾಡುತ್ತೇನೆ. ನಿಮಗೆ ಗೊತ್ತಿದೆ- ಇಡೀ ಪ್ರಪಂಚದಲ್ಲಿ ಸಾಕ್ಷಾತ್ಕಾರ ಮಾಡಿಸುವ ಕರ್ತವ್ಯವನ್ನು ಯಾರು ಮಾಡುತ್ತಾರೆ? ಭಲೆ ನಾಟಕದಲ್ಲಿ ಎಲ್ಲವೂ ಮೊದಲಿನಿಂದಲೇ ನಿಗಧಿಯಾಗಿದೆ. ಅದೇ ಸಮಯದಲ್ಲಿ ಸಾಕ್ಷಾತ್ಕಾರವಾಗುತ್ತದೆ. ಪರಮಾತ್ಮನು ದಿವ್ಯದೃಷ್ಟಿಯಿಂದ ಸಾಕ್ಷಾತ್ಕಾರ ಮಾಡಿದರು ಎಂದು ತಿಳಿಯುತ್ತಾರೆ. ಅಲ್ಲಿ-ಇಲ್ಲಿ ಸಾಕ್ಷಾತ್ಕಾರಗಳಾಗುತ್ತವೆ. ಈ ಸಾಕ್ಷಾತ್ಕಾರವೂ ಸಹ ನಾಟಕದಲ್ಲಿ ನಿಗಧಿಯಾಗಿದೆ, ಇದರಲ್ಲಿ ಬಹಳ ವಿಶಾಲಬುದ್ಧಿಯು ಬೇಕು. ಇವು ಹೊಸಮಾತುಗಳಾಗಿವೆ. ಸೃಷ್ಟಿಚಕ್ರವು ಬುದ್ಧಿಯಲ್ಲಿ ತಿರುಗುತ್ತಿರಬೇಕು. ಈ ಸ್ವದರ್ಶನಚಕ್ರವು ಕೆಲಕೆಲವರಿಗೆ ತುಂಬಾ ವೇಗವಾಗಿ ಕೆಲವರಿಗೆ ಮಂದಗತಿಯಲ್ಲಿತಿರುಗುತ್ತೆ. ನೀವು ಸ್ವದರ್ಶನ ಚಕ್ರಧಾರಿಗಳಾಗಿದ್ದೀರಿ. ಸೇವೆಯಲ್ಲಿ ಬುದ್ಧಿ ನಂಬರ್ವಾರ್ ನಡೆಯುತ್ತಿರುತ್ತದೆ. ಕೆಲವರಿಗಂತೂ ಸ್ವದರ್ಶನಚಕ್ರವನ್ನು ಸುತ್ತಿಸುವುದೇ ಇಲ್ಲ. ಗಾಳಿಯಂತೂ ಬೀಸುತ್ತೆ ಆದರೂ ಕೆಲವರದು ಬಹಳ ವೇಗವಾಗಿ ತಿರುಗುತ್ತೆ. ಇನ್ನೂ ಕೆಲವರದು ಕಡಿಮೆತಿರುಗುತ್ತೆ. ಕೆಲವರದಂತೂ ಪೂರ್ತಿ ತಿರುಗುವುದೇ ಇಲ್ಲ. ಸ್ವದರ್ಶನವು ತಿರುಗಲಿಲ್ಲವೆಂದರೆ ಬಾಕಿ ಏನು ಪದವಿಯನ್ನು ಪಡೆಯುತ್ತೀರಿ? ಅಂದಮೇಲೆ ಇದು ಹೊಸ ಮಾತಾಯಿತಲ್ಲವೆ. ತಂದೆಯು ತಿಳಿಸುತ್ತಿರುತ್ತಾರೆ- ಆಸ್ತಿಯನ್ನು ಪಡೆಯಬೇಕೆಂದರೆ ಈಗಲೇ ಪಡೆಯಿರಿ, ಇಲ್ಲವೆಂದರೆ ಅಂತ್ಯದಲ್ಲಿ ಅಳುತ್ತೀರಿ, ಪಶ್ಚಾತ್ತಾಪ ಪಡುತ್ತೀರಿ. ಶಿಕ್ಷಕನನ್ನು ಪ್ರತ್ಯಕ್ಷ ಮಾಡಬೇಕಲ್ಲವೆ. ಇದು ಎಷ್ಟು ದೊಡ್ಡ ಕಾಲೇಜಾಗಿದೆಯಲ್ಲವೆ. ಚೆನ್ನಾಗಿ ಓದಿದರೆ ಒಳ್ಳೆಯ ಪದವಿಯನ್ನೇ ಪಡೆಯುತ್ತಾರೆ. ನಾವು ಪೂರ್ಣ ಅನುಕರಣೆ ಮಾಡುತ್ತೇವೆಂದು ಪ್ರತಿಜ್ಞೆ ಮಾಡಬೇಕು. ಫಾಲೊ ಫಾದರ್-ಮದರ್. ಈ ರೀತಿಯೂ ಅಲ್ಲ, ಬ್ಯಾರಿಸ್ಟರ್ನ ಮಕ್ಕಳು ಬ್ಯಾರಿಸ್ಟರ್ ಪದವಿಯನ್ನೆ ಪಡೆಯುತ್ತಾರೆ ಎಂದಲ್ಲ. ಕೆಲವರು ಡಾಕ್ಟರ್ ಆಗುವರು, ಕೆಲವರು ಇಂಜಿನಿಯರ್ ಆಗುವರು, ಇನ್ನೂ ಕೆಲವರಂತೂ ಕಳ್ಳರೂ ಸಹ ಆಗಿಬಿಡುತ್ತಾರೆ. ತಂದೆಯು ತಿಳಿಸುತ್ತಾರೆ- ನನ್ನ ಪ್ರತ್ಯಕ್ಷತೆ ಮಾಡಿಸಲು ನೀವು ನರನಿಂದ ನಾರಾಯಣರಾಗಿ ತೋರಿಸಿ ಆಗ ನನ್ನ ಗಾಯನವೂ ಆಗುವುದು, ನಿಮ್ಮದೂ ಸಹ ಆಗುವುದು. ನೀವೂ ಸಹ ದೇವತೆಗಳಾಗುತ್ತೀರಿ. ನನ್ನ ಮಂದಿರವೂ ಆಗುವುದು, ನಿಮ್ಮ ಮಂದಿರವೂ ಆಗುವುದು. ಮುಖ್ಯವಾಗಿ ಶಿವತಂದೆಯೊಬ್ಬರ ಮಂದಿರವಾಗಬೇಕು ನಂತರ ಅವರಜೊತೆ ಬ್ರಹ್ಮ ಮತ್ತು ಮಕ್ಕಳು. ದಿಲ್ವಾಡಾ ಮಂದಿರದಲ್ಲಿ ಅನೇಕ ಪ್ರಕಾರದವರಿದ್ದಾರಲ್ಲವೆ. ಇದೇ ದೊಡ್ಡದಕ್ಕಿಂತ ದೊಡ್ಡ ನೆನಪಾರ್ಥವಾಗಿದೆ. ನೀವು ಚೈತನ್ಯದಲ್ಲಿ ಕುಳಿತಿದ್ದೀರಿ. ಶಕ್ತಿಯರನ್ನು ಹುಲಿಯ ಮೇಲೆ ಸವಾರಿ, ಮಹಾರಥಿಯನ್ನು ಆನೆಯ ಮೇಲೆ ಸವಾರಿ ತೋರಿಸುತ್ತಾರೆ. ಗಜವನ್ನು ಮೊಸಳೆ ನುಂಗಿತು. ತಂದೆಯ ನೆನಪಿನಲ್ಲಿರಲಿಲ್ಲವೆಂದರೆ ಮಾಯಾಮೊಸಳೆಯು ತಿಂದುಬಿಡುತ್ತದೆ. ಒಳ್ಳೊಳ್ಳೆಯ ಮಹಾರಥಿಗಳನ್ನೂ ಸಹ ಇದು ತಿಂದುಬಿಡುತ್ತದೆ. ಇದರಲ್ಲಿ ಬಹಳ ಗಂಭೀರತೆಯು ಬೇಕು ಮತ್ತು ನಾನು ಇದನ್ನು ಮಾಡುತ್ತೇನೆಂದು ಅಭಿಮಾನವೂ ಬರಬಾರದು. ಎಷ್ಟು ಸಾಧ್ಯವೋ ಅಷ್ಟು ಪ್ರತಿಯೊಂದು ಮಾತಿನಲ್ಲಿ ಮಾತೆಯರನ್ನು ಮುಂದಿಡಬೇಕು. ಮಾತೆಯರಿಗೆ ಗೌರವ ಕೊಡಬೇಕು. ಎಲ್ಲಾ ಬೀಗದ ಕೈಗಳು ಮಾತೆಯರ ಕೈಯಲ್ಲಿರಬಹುದು. ಮಾತೆಯರ ಮುಖಾಂತರ ಸಮಾಚಾರವು ಬರಬೇಕು. ಹಾ! ಕೆಲವೊಂದೆಡೆ ಕನ್ಯೆಯರು ಅಥವಾ ಮಾತೆಯರಿಗಿಂತಲೂ ಕುಮಾರರು ಬುದ್ಧಿವಂತರಿರುತ್ತಾರೆ. ಅವರು ಸಲಹೆಯನ್ನು ಬರೆಯಬಹುದಾಗಿದೆ. ಆಜ್ಞೆಯು ಸರ್ಕಾರದ್ದಾಗಿದೆ, ರಾಜ್ಯವು ರಾಣಿಯದಾಗಿದೆ. ಮೊದಲು ರಾಣಿ ನಂತರ ರಾಜ. ಮೊದಲು ಮಾತಾಗುರು ಬೇಕು. ಪುರುಷರು ಗುರುಗಳಾಗುವ ಕಾಯಿದೆಯಿಲ್ಲ. ಮಾತೆಯರನ್ನೂ ಮುಂದಿಡಬೇಕು - ನಿಯಮವು ಹೀಗೆ ಹೇಳುತ್ತದೆ. ಭಲೆ ಕೆಲವೊಂದೆಡೆ ಪುರುಷರೂ ನಿಮಿತ್ತರಾಗುತ್ತಾರೆ, ಅವರು ಮಾತೆಯರನ್ನು ಜ್ಞಾನದಲ್ಲಿ ಕರೆದುಕೊಂಡು ಬರುತ್ತಾರೆ ಆದರೆ ಮೆಜಾರಿಟಿ ಮಾತೆಯರದಾಗಿದೆ. ನಾನು ಎಲ್ಲವನ್ನೂ ತಿಳಿದಿದ್ದೇನೆ, ಬುದ್ಧಿವಂತನಾಗಿದ್ದೇನೆ ಎಂದು ಅಹಂಕಾರವಿರಬಾರದು. ಮಾತೆಯರನ್ನು ಬುದ್ಧಿವಂತರನ್ನಾಗಿ ಮಾಡಬೇಕಾಗಿದೆ. ಮಾತೆಯರ ಮುಖಾಂತರ ಸೇವಾಕೇಂದ್ರ ಮುಂತಾದವುಗಳನ್ನು ನಡೆಸಬೇಕಾಗಿದೆ. ಅಂತ್ಯದಲ್ಲಿ ಸನ್ಯಾಸಿಗಳು ಮುಂತಾದವರಿಗೂ ಸಹ ಮಾತೆಯರ ಬಾಣಗಳೇ ನಾಟಲಿದೆ ಆದ್ದರಿಂದ ನಿಯಮದನುಸಾರ ನಡೆಯಲಿದೆ. ಪರಮಪಿತ ಪರಮಾತ್ಮನ ನಿಂದನೆ ಮಾಡುವವರು ಶ್ರೇಷ್ಠಪದವಿಯನ್ನು ಪಡೆಯಲು ಸಾಧ್ಯವಿಲ್ಲ. ತಂದೆಯು ಎಲ್ಲರಿಗೂ ಸೂಚನೆಯನ್ನು ಕೊಡುತ್ತಾರೆ. ಬಹಳ ಮಧುರರಾಗಬೇಕು. ಯಾರದೇ ಮಾತು ಇಷ್ಟವಾಗದಿದ್ದರೆ ಒಂದು ಕಿವಿಯಿಂದ ಕೇಳಿ ಇನ್ನೊಂದರಿಂದ ತೆಗೆದುಹಾಕಿ. ಕ್ರೋಧವು ಬಹಳ ನಷ್ಟಮಾಡುತ್ತದೆ. ಕಾಮಕ್ಕಿಂತ ಕ್ರೋಧವು ಏಕೆ ಮುಂದಿಡಲಿಲ್ಲವೆಂದು ಕೆಲಕೆಲವರು ಬರೆಯುತ್ತಾರೆ ಆದರೆ ಇಲ್ಲಿ ಕಾಮವಂತೂ ಆದಿ-ಮಧ್ಯ-ಅಂತ್ಯ ದುಃಖ ಪ್ರಾಪ್ತಿ ಮಾಡಿಸುತ್ತದೆ. ಪತಿತ-ಪಾವನಿ ಒಬ್ಬರೇ ತಂದೆಯೆಂದು ಗಾಯನವಿದೆ. ಸನ್ಯಾಸಿಗಳು ಪಾವನರನ್ನಾಗಿ ಮಾಡಲು ಸಾಧ್ಯವಿಲ್ಲ. ಅಂದಾಗ ನೀವು ಹೊಸಮಾತುಗಳನ್ನು ಕೇಳುತ್ತೀರಿ. ಶ್ರೇಷ್ಠಾತಿಶ್ರೇಷ್ಠ ಭಗವಂತ ನಿಮಗೆ ಓದಿಸುತ್ತಾರೆ ಅವರನ್ನೇ ಶ್ರೀ ಶ್ರೀ ಎಂದು ಹೇಳಲಾಗುತ್ತದೆ. ನಂತರ ಮನುಷ್ಯ ಸೃಷ್ಟಿಯನ್ನು ಶ್ರೀಲಕ್ಷ್ಮಿ-ಶ್ರೀನಾರಾಯಣ, ಶ್ರೀರಾಮ, ಶ್ರೀಸೀತೆಗೆ ಹೇಳುತ್ತಾರೆ. ಒಳ್ಳೆಯದು. ಅವರನ್ನು ಈ ರೀತಿ ಶ್ರೇಷ್ಠರನ್ನಾಗಿ ಮಾಡಿದವರು ಯಾರು? ಶ್ರೀ ಶ್ರೀ ಶಿವತಂದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಪರಸ್ಪರದಲ್ಲಿ ಏಕಮತವಿರಬೇಕಾಗಿದೆ. ಒಬ್ಬರು ಇನ್ನೊಬ್ಬರಿಗೆ ಗೌರವ ಕೊಡಬೇಕಾಗಿದೆ. ಮುನಿಸಿಕೊಂಡು ಎಂದೂ ಸಹ ವಿದ್ಯೆಯನ್ನು ಬಿಡಬಾರದು.

2. ಕ್ರೋಧವು ಬಹಳ ನಷ್ಟದಾಯಕವಾಗಿದೆ ಆದ್ದರಿಂದ ಯಾವ ಮಾತು ಇಷ್ಟವಾಗುವುದಿಲ್ಲವೋ ಅದನ್ನು ಒಂದು ಕಿವಿಯಿಂದ ಕೇಳಿ ಇನ್ನೊಂದರಿಂದ ತೆಗೆದುಹಾಕಬೇಕಾಗಿದೆ. ಕ್ರೋಧ ಮಾಡಬಾರದು. ತುಂಬಾ-ತುಂಬಾ ಮಧುರರಾಗಬೇಕಾಗಿದೆ.

ವರದಾನ: ಬುದ್ಧಿಯ ಮುಖಾಂತರ ಶುದ್ಧ ಸಂಕಲ್ಪಗಳ ಭೋಜನ ಸ್ವೀಕಾರ ಮಾಡುವಂತಹ ಸದಾ ಸ್ವಚ್ಛ ಹೋಲಿ ಹಂಸ ಭವ

ಹೋಲಿ ಹಂಸಗಳು ಎಂದೂ ಸಹ ಬುದ್ಧಿಯ ಮೂಲಕ ಜ್ಞಾನದ ಮುತ್ತುಗಳನ್ನಲ್ಲದೆ ಬೇರೆ ಏನನ್ನೂ ಸಹ ಸ್ವೀಕಾರ ಮಾಡುವುದಿಲ್ಲ. ಹೋಲಿ ಹಂಸ ಅರ್ಥಾತ್ ಸದಾ ಸ್ವಚ್ಛ, ಸದಾ ಪವಿತ್ರ, ಪವಿತ್ರತೆಯೇ ಸ್ವಚ್ಛತೆಯಾಗಿದೆ. ಹೋಲಿ ಹಂಸ ಸಂಕಲ್ಪವನ್ನೂ ಸಹ ಅಶುದ್ಧವಾಗಿರುವುದನ್ನು ಮಾಡುವುದಿಲ್ಲ. ಸದಾ ಶುದ್ಧ ಸಂಕಲ್ಪಗಳ ಭೋಜನ ಸ್ವೀಕರಿಸುವಂತಹ ಹೋಲಿ ಹಂಸ ಸದಾ ಆರೋಗ್ಯವಾಗಿರುತ್ತಾರೆ. ಅವರ ಮೇಲೆ ಯಾರದೇ ಪ್ರಭಾವ ಬೀಳಲು ಸಾಧ್ಯವಿಲ್ಲ.

ಸ್ಲೋಗನ್: ತಮ್ಮ ಮನಸ್ಸಿನ ಮೂಲಕ ಶಾಂತಿ ಕುಂಡವನ್ನು ಪ್ರತ್ಯಕ್ಷ ಮಾಡುವಂತಹ ಶಾಂತಿಪ್ರೀಯ ಆತ್ಮ ಭವ.